# ಧ್ಯಾನ ಕಸ್ತೂರಿ

ರೂ. ೨೫/-

ಹೊಸ ಯುಗದ ಆಧ್ಯಾತ್ಮಿಕ ಮಾಸ ಪತ್ರಿಕೆ

ಜನವರಿ ೨೦೧೦



೨೦೧೨ರ ಹೊತ್ತಿಗೆ ಇಡೀ ಜಗತ್ತನ್ನು ಆಧ್ಯಾತ್ಮೀಕರಿಸೋಣ !

# ಧ್ಯಾನ ಕಸ್ತೂರಿ ಮಾಸಪತ್ರಿಕೆಯ ಪೋಷಕರು
## (LIFE PATRONS)



ಶ್ರೀ ಐ.ವಿ ರೆಡ್ಡಿ ದಂಪತಿಗಳು



ಶ್ರೀ ಟಿ.ಕೆ ಪ್ರೇಮ್‌ಕುಮಾರ್, ಪತ್ನಿ ಶ್ರೀಮತಿ ಭಾರತಿ ಹಾಗೂ ಮಕ್ಕಳು



ಶ್ರೀಮತಿ ಸುಷ್ಮ ಮತ್ತು ಅವರ ಕುಟುಂಬ



ಶ್ರೀಮತಿ ವಿಮಲ ವೆಂಕಟೇಶ್

ಈ ನವಯುಗದ ಆಧ್ಯಾತ್ಮಿಕ ಮಾಸಪತ್ರಿಕೆಯು ಪ್ರತಿಯೊಬ್ಬರಿಗೂ ಮುಟ್ಟಲಿ ಎನ್ನುವ ಉನ್ನತ ಭಾವನೆಗಳೊಂದಿಗೆ ಅವರು ನೀಡುತ್ತಿರುವ ಪ್ರೋತ್ಸಾಹಕ್ಕೆ ಪತ್ರಿಕೆಯ ಓದುಗರು ಹಾಗೂ ಪತ್ರಿಕೆಯ ವಿಭಾಗವು ಅವರಿಗೂ, ಅವರ ಕುಟುಂಬಕ್ಕೂ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

## ಪತ್ರೀಜಿ ವಾಣಿ

# ಎಲ್ಲವೂ ಪೂರ್ಣ !

ತಾಯಿಯಿಂದ ಮಗು ಹುಟ್ಟುತ್ತದೆ!
ಪೂರ್ಣಾತ್ಮದಿಂದ ಅಂಶಾತ್ಮ ಹುಟ್ಟುತ್ತದೆ!

* * *

ತಾಯಿಯಿಂದ ಮಗು ಹುಟ್ಟಿದರೂ ಕೂಡಾ, ತಾಯಿಗೆ ಯಾವ ನಷ್ಟವೂ ಇಲ್ಲ!
ತಾಯಿ ಪೂರ್ಣವಾಗಿಯೇ ಇರುತ್ತಾಳೆ!

* * *

ಮಗು ಕೂಡಾ ಪೂರ್ಣವೇ, ಆದರೆ, ಚಿಕ್ಕ ಪ್ರಮಾಣದ ಪೂರ್ಣತೆ!
ಇನ್ನೂ ನೋಡಲು ಆಗದ, ಮಾತನಾಡಲಿಕ್ಕೆ ಆಗದ, ನಡೆಯಲಿಕ್ಕೆ ಆಗದ ಪೂರ್ಣ!

* * *

"ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೆ!
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ!"

* * *

ಪೂರ್ಣದಿಂದ ಪೂರ್ಣವು ಹುಟ್ಟುತ್ತದೆ!
ಪೂರ್ಣದಿಂದ ಪೂರ್ಣ ಹುಟ್ಟಿದರೂ ಪೂರ್ಣವಾಗಿಯೇ ಇರುತ್ತದೆ!

* * *

ಹುಟ್ಟಿದ ಮಗುವು ಪೂರ್ಣವಾಗಿ ಬೆಳೆಯಬೇಕು!
ತಾನೂ ಸಂಪೂರ್ಣವಾಗಬೇಕು!

* * *

ತಾಯಿಯಿಂದ ಮಗು ಹುಟ್ಟಿ ಬೆಳೆದು ದೊಡ್ಡದಾಗಿ,
ತಾನೂ ಕೂಡಾ ಮಕ್ಕಳನ್ನು ಹಡೆಯುವಷ್ಟು ಪೂರ್ಣ

* * *

ಅದೇ ರೀತಿಯಾಗಿ...
ಒಂದು ಪೂರ್ಣಾತ್ಮದ ಸಂಕಲ್ಪದ ಮೂಲಕ
ಒಂದು ಅಂಶಾತ್ಮ ಹುಟ್ಟಿ  ಬಡುಗಡೆಯಾಗಿ, ಬೆಳೆದು,
ತಾನೂ ಪೂರ್ಣಾತ್ಮವಾಗಿ ಪರಿವರ್ತನೆ ಹೊಂದಿ, ತಾನೂ ಕೂಡಾ ಅಂಶಾತ್ಮಗಳನ್ನು ಹುಟ್ಟಿಸುತ್ತದೆ.

* * *

ಪೂರ್ಣಾತ್ಮದಿಂದ ಹೊರಬಂದ ಅಂಶಾತ್ಮ
ಅನೇಕ ಜನ್ಮ ಪರಂಪರೆಗಳ ಆಧಾರದಿಂದ, ಅನೇಕ ಕರ್ಮಗಳ ಆಧಾರದ ಮೇಲೆ
ಅನೇಕ ಲೋಕಗಳಲ್ಲಿ ಪೂರ್ಣವಾಗಿ ಬೆಳೆಯುತ್ತದೆ!
ತಾನೂ ಕೂಡಾ ಪೂರ್ಣ ಸ್ಥಾಯಿಗೆ ಬೆಳೆದು, ಪೂರ್ಣಾತ್ಮವಾಗಿ ರಾರಾಜಿಸುತ್ತದೆ!

* * *

**ಇದೇ ಸೃಷ್ಟಿಯ ಕ್ರಮ...! ಇದೇ ಸೃಷ್ಟಿಯಲ್ಲಿನ ಜೀವಪರಿಣಾಮ...!**
**ಎಲ್ಲವೂ ಅದ್ಭುತ...! ಎಲ್ಲವೂ ಮಹಾ ಅದ್ಭುತ...!!**

# ಧ್ಯಾನ ಕಸ್ತೂರಿ



ಬ್ರಹ್ಮರ್ಷಿ ಸುಭಾಷ್ ಪತ್ರೀಜಿ
ಸಂಸ್ಥಾಪಕರು



ಶ್ರೀ ಎ. ಸತ್ಯನಾರಾಯಣ
ಸಂಪಾದಕರು



ಅನಿತ
ನಿರ್ವಾಹಕರು



ಅಯ್ಯಪ್ಪ
ತಾಂತ್ರಿಕತೆ ಮತ್ತು ವಿನ್ಯಾಸ



ಓಬುಲ್ ರಾವ್
ತಾಂತ್ರಿಕತೆ ಮತ್ತು ವಿನ್ಯಾಸ



ಚಂದ್ರಮೋಹನ್
ಮಾರ್ಕೆಟಿಂಗ್ ಮ್ಯಾನೇಜರ್

**ಸಂಪಾದಕ ಮಂಡಳಿ**
ಶ್ರೀ ಭೀಮೇಶ್ ರೆಡ್ಡಿ, ಬೆಂಗಳೂರು
ಶ್ರೀ ಜೆ.ಎನ್.ತಿಮ್ಮಯ್ಯ, ಬೆಂಗಳೂರು
ಶ್ರೀ ಬಿ.ಶಿವರಾಮಪ್ಪ, ಬೆಂಗಳೂರು

**ಹೋರಾಟ ಸಹಾಯಕ ಮಂಡಳಿ**
1.ಅನುರಾಧ, ಗುಲ್ಬರ್ಗಾ
2.ಜಗದೇವಿ ಭೋಸ್‌ಕೆ, ಗುಲ್ಬರ್ಗಾ
3.ಶ್ರೀಮತಿ ಸಂಧ್ಯ, ಬೆಂಗಳೂರು
4.ಶ್ರೀಮತಿ ಸರಳ, ಬೆಂಗಳೂರು
5.ಸೂರ್ಯನಾರಾಯಣ, ಬಳ್ಳಾರಿ
6.ಶ್ರೀಮತಿ ನಿರ್ಮಲ, ಬೆಂಗಳೂರು

**ಮುದ್ರಕರು ಹಾಗೂ ಪ್ರಕಾಶಕರು :**
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್(ರಿ)**
ನಂ. 126,ಪಿರಮಿಡ್ ಭವನ್, 2ನೇ ಮಹಡಿ, 7ನೇ ಮುಖ್ಯ ರಸ್ತೆ, 4ನೇ
ಬಡಾವಣೆ, ಜಯನಗರ, ಬೆಂಗಳೂರು - 560 011
ದೂರವಾಣಿ : 080-26646899, 9481359920
e-mail: kpdptrust@gmail.com
ಪ್ರಿಂಟರ್ಸ್ : ಡಾಟ್ಸ್ ಇನೋವೇಟಿವ್ ಪ್ರಿಂಟರ್ಸ್, ಸುಲ್ತಾನ್ ಪೇಟೆ, ಬೆಂಗಳೂರು
www.pssmovement.org

## ಪರಿವಿಡಿ

ಪತ್ರೀಜಿ ವಾಣಿ ........ 1
ಪರಿವಿಡಿ ........ 2
ಸಂಪಾದಕೀಯ ........ 3
ಧ್ಯಾನದ ವಿಧಾನ ಮತ್ತು ಏಕತಾ ಧ್ಯಾನ ........ 4
2012 ........ 5
ನೂತನ ಯುಗಕ್ಕೆ ಆರಂಭ ........ 7
ಚಕ್ರಗಳು ಶಕ್ತಿ ಕೇಂದ್ರಗಳು ........ 10
ವಾಹಕತ್ವ ........ 12
ನ್ಯೂಟನ್‌ರವರ ಇಂಟರ್‌ವ್ಯೂ ........ 14
ಓಷೋ ಕಥೆ ........ 18
ಪಿರಮಿಡ್ ವ್ಯಾಲಿಯಲ್ಲಿ ಪತ್ರೀಜಿ ........ 19
ಆಧ್ಯಾತ್ಮಿಕ ಶಾಸ್ತ್ರ ........ 21
ಬಸವಣ್ಣ ........ 25
ಟೂರ್ಸ್ & ಟ್ರೆಕಿಂಗ್ಸ್ ........ 28
ಯೂತ್ ಕಾಲಮ್ ........ 29
ಭೀಮೇಶ್ ಕಲಂ ಟು ಕಾಲಂ ........ 31
ಮಾಂಸಾಹಾರವನ್ನು ಏಕೆ ಬಿಡಬೇಕು ........ 33
ಪಿರಮಿಡ್‌ನಲ್ಲಿ ಒಂದು ಅದ್ಭುತ ರಾತ್ರಿ ........ 35
ಪತ್ರೀಜಿಯವರ ಗುಲ್ಬರ್ಗ ಪರ್ಯಟನೆ ........ 38
ಧ್ಯಾನಾನುಭವಗಳು ........ 40
ಜೆನ್ ........ 42
ಪುಸ್ತಕ ಪರಿಚಯ ........ 43
ಸಿನಿಮಾ ........ 44
ಮುಗುಳ್ನಗೆ ........ 45
ವ್ಯಾಲಿಯಲ್ಲಿ ನಡೆಯುವ ಕಾರ್ಯಕ್ರಮಗಳು ........ 46

E-mail : dhyanakasturi@gmail.com

# ಸಂಪಾದಕೀಯ

"ಒಂದು ಮಗು ಹುಟ್ಟಿದ ಮೇಲೆ ಜೀವನದಲ್ಲಿ ಹೇಗೆ ವಿವಿಧ ಬೆಳವಣಿಗೆಯ ಹಂತವನ್ನು ತಲುಪುತ್ತದೆಯೋ ಹಾಗೆಯೇ ಈ ಭೂಮಿ ಸಹ ನಿರಂತರ ಬದಲಾವಣೆ ಹೊಂದುತ್ತಿದೆ. ಕ್ರಮೇಣ ಭೂಮಿಯ ಮೇಲಿರುವ ಎಲ್ಲರೂ ಸಹ ಒಂದು ಮಾನಸಿಕ ಸ್ಥಿತಿಯಿಂದ ಮತ್ತೊಂದು ಮಾನಸಿಕ ಸ್ಥಿತಿಗೆ ಬೆಳೆಯುತ್ತಿದ್ದಾರೆ. ಇದು ಯುಗದ ಪರಿವರ್ತನೆಯೇ ಹೊರತು ಯುಗದ ಅಂತ್ಯವಲ್ಲ" ಎಂದು 2012ರ ಬದಲಾವಣೆಯನ್ನು ಕುರಿತು ಬ್ರಹ್ಮರ್ಷಿ ಪತ್ರೀಜಿಯವರು ವ್ಯಾಖ್ಯಾನಿಸಿದ್ದಾರೆ. ಹಾಗೆಯೇ, "ಜಗತ್ತು 2012ರಲ್ಲಿ ಕೊನೆಗೊಳ್ಳುವುದಿಲ್ಲ, ಆದರೊಂದು ಹೊಸ ಉದಯ, ಹೊಸ ಬದುಕು ನವಾಗಾಗಿ ಕಾಯುತ್ತಿದೆ. ಇದಕ್ಕಾಗಿ ನಾವು ಸಕಾರಾತ್ಮಕವಾಗಿ ಬದಲಾಗಬೇಕಿದೆ, ಒಳ್ಳೆಯದು ಇಟ್ಟುಕೊಂಡು, ಕೆಟ್ಟದ್ದನ್ನು ಬಿಟ್ಟುಬಿಡಬೇಕಾಗಿದೆ, ನಾವೆಲ್ಲಾ ಬದಲಾದರೆ, ನಮ್ಮ ವಿಧಿಯೂ ಸಹ ಬದಲಾಗುತ್ತದೆ. ಆಗ 2012 ಬೆಳಕಿಗೆ ಬಾಗಿಲಾಗುತ್ತದೆ" ಎನ್ನುತ್ತಾರೆ ಶ್ರೀ ಗುರೂಜಿ ಕೃಷ್ಣಾನಂದರು. ಬ್ರಹ್ಮರ್ಷಿ ಪತ್ರೀಜಿಯವರು ಮತ್ತು ಗುರೂಜಿ ಕೃಷ್ಣಾನಂದರ ವಿಚಾರಗಳನ್ನು ಒಳಗೊಂಡ ಸಂದರ್ಶನ ಮತ್ತು ಲೇಖನ ಈ ಸಂಚಿಕೆಯ ಪ್ರಮುಖಾಂಶವಾಗಿದೆ.

ಆಧ್ಯಾತ್ಮಿಕ ಶಾಸ್ತ್ರವನ್ನು ಅರಿತು ಅದನ್ನು ಪ್ರತಿಯೊಬ್ಬರೂ ಸಹ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ಇಡೀ ಜಗತ್ತಿನಲ್ಲಿ ಎಲ್ಲೆಡೆಯೂ ಸಹ ಉತ್ತಮ ಬದಲಾವಣೆ ಸಾಧ್ಯವಿದೆ. ಅದೇ ಯುಗದ ಪರಿವರ್ತನೆ ಎಂದು ಸಾರುವ ಹಲವು ಲೇಖನಗಳು ಈ ಸಂಚಿಕೆಯಲ್ಲಿವೆ. ಕರ್ನಾಟಕದ ದಾರ್ಶನಿಕರ, ದಾಸವರೇಣ್ಯರ, ವಚನಕಾರರ ಆಧ್ಯಾತ್ಮಿಕ ತತ್ವ ಚಿಂತನೆಗಳನ್ನು ಧ್ಯಾನ ಕಸ್ತೂರಿಯಲ್ಲಿ ಹೆಚ್ಚು ಹೆಚ್ಚಾಗಿ ಪ್ರಕಟಿಸಲು ಉದ್ದೇಶಿಸಿ, ಪತ್ರಿಕೆಯ ಬಣ್ಣದ ಪುಟಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ.

ಪಿರಮಿಡ್ ಶಕ್ತಿ ಕುರಿತಾಗಿ, ಚಾನೆಲಿಂಗ್ ಬಗ್ಗೆ ಮತ್ತು ಸಸ್ಯಾಹಾರೀ ಜೀವನ ಕ್ರಮದ ಬಗ್ಗೆ ಅತ್ಯುತ್ತಮ ಲೇಖನಗಳು ನಿಮಗಾಗಿ ಪ್ರಕಟಗೊಂಡಿವೆ. ಬುದ್ಧನ ತತ್ವಗಳನ್ನು ಸರಳವಾಗಿ, ಸ್ವಾರಸ್ಯಕರವಾಗಿ ತಿಳಿಸಿಕೊಡುವ ಜೆನ್ ಕಥೆಗಳು ಜಗತ್ ಪ್ರಸಿದ್ಧ. ಅವುಗಳನ್ನು ನಿಮಗಾಗಿ ಈ ಸಂಚಿಕೆಯಿಂದ ನಿರಂತರವಾಗಿ ಪ್ರಕಟಿಸಲಾಗುವುದು. ಚಿತ್ರ ಮತ್ತು ಪುಸ್ತಕ ವಿಮರ್ಶೆ ಹಾಗೂ ಪತ್ರೀಜಿಯವರ ಪ್ರವಾಸದ ವರದಿಗಳ ಸಹಿತ, ಸಮೃದ್ಧವಾಗಿ ಹೊರಬರುತ್ತಿರುವ ಧ್ಯಾನ ಕಸ್ತೂರಿ ಪತ್ರಿಕೆಯನ್ನು ನೀವೂ ಓದಿ, ಇತರರಿಂದಲೂ ಓದಿಸಿ ಎನ್ನುವ ಪ್ರೀತಿಯ ಒತ್ತಾಯದೊಂದಿಗೆ, ಹೆಚ್ಚು ಜನರು ಧ್ಯಾನ ಕಸ್ತೂರಿಯ ಪೋಷಕರಾಗಲು ವಿನಂತಿಸಿದೆ. ವಂದನೆಗಳು.

**ಎ.ಸತ್ಯನಾರಾಯಣ**

ವಿಳಾಸ: ನಂ.958, 2ಜಿ ಕ್ರಾಸ್, 1ನೇ ಬ್ಲಾಕ್
ಹೆಚ್.ಆರ್.ಬಿ.ಆರ್. ಬಡಾವಣೆ
ಕಲ್ಯಾಣನಗರ, ಬೆಂಗಳೂರು 560 043
ದೂ: 080-25427145, 9448883872
ಇ-ಮೇಯ್ಲ್: sathyaasn@gmail.com

# ಪಿರಮಿಡ್ ಆಧ್ಯಾತ್ಮಿಕ ಮತ್ತು ಧ್ಯಾನ ಶಿಕ್ಷಣಾಲಯ

ಆಧ್ಯಾತ್ಮಿಕ ರಂಗದಲ್ಲಿ ಮತ್ತೊಂದು ನೂತನ ಪ್ರಯೋಗ ! ಅದುವೆ ಪಿರಮಿಡ್ ಆಧ್ಯಾತ್ಮಿಕ ಮತ್ತು ಧ್ಯಾನ ಶಿಕ್ಷಣಾಲಯ !

ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ ಹಮ್ಮಿಕೊಳ್ಳುವ ಕಾರ್ಯಕ್ರಮಗಳೆಲ್ಲವೂ ಅದ್ಭುತಗಳೆ ಎನ್ನುವುದರಲ್ಲಿ ಅತಿಶಯೋಕ್ತಿಯೇ ಇಲ್ಲ. ಅಂತಹ ಅದ್ಭುತಗಳಲ್ಲಿ ಒಂದಾಗಿದೆ ನಮ್ಮ ಈ ಪಿರಮಿಡ್ ಆಧ್ಯಾತ್ಮಿಕ ಮತ್ತು ಧ್ಯಾನ ಶಿಕ್ಷಣಾಲಯ. ಆಧ್ಯಾತ್ಮಿಕ ಸಂಸ್ಥೆಗಳಲ್ಲಿ ಈ ರೀತಿಯ ವಿಶೇಷವಾದ ಧ್ಯಾನ ಶಿಕ್ಷಣ ಮತ್ತು ಆಧ್ಯಾತ್ಮಿಕ ವಿಜ್ಞಾನ ವಿಷಯಗಳೊಂದಿಗೆ ಪ್ರತ್ಯೇಕ ಪಾಠಶಾಲೆಗಳನ್ನು ನಿರ್ವಹಿಸುವುದು ಅತಿ ವಿಶೇಷವಲ್ಲವೆ. ಬ್ರಹ್ಮರ್ಷಿ ಪತ್ರೀಜಿ ಅವರ ಆದೇಶಾನುಸಾರ ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ ವತಿಯಿಂದ ಪಿರಮಿಡ್ ಧ್ಯಾನ ಮತ್ತು ಆಧ್ಯಾತ್ಮಿಕ ಶಿಕ್ಷಣಾಲಯ ಸ್ಥಾಪನೆ ಆಗಿರುವುದು ಅತಿ ಮಹತ್ವಪೂರ್ಣವಾದದ್ದು, ಹೆಮ್ಮೆ ಪಡುವಂತದು.

ಆತ್ಮಜ್ಞಾನ ಎಲ್ಲರಿಗೂ ಸಂಪೂರ್ಣವಾಗಿರಬೇಕು ಸರಿಯಾದುದಾಗಿರಬೇಕು. ಮತ್ತು ಸರಿಯಾದ ರೀತಿ ಬೋಧನೆ ಮಾಡುವುದೂ ಅವಶ್ಯಕ. ಇವೆಲ್ಲವನ್ನು ಪಿರಮಿಡ್ ಮಾಸ್ಟರುಗಳಿಗೆ ತಲುಪಿಸುವುದು ಅಲ್ಲದೆ, ಈ ಶಿಕ್ಷಣಾಲಯದ ಮೂಲಕ ಧ್ಯಾನಪ್ರಚಾರವನ್ನು ಶೀಘ್ರತರವಾಗಿ ಮಾಡುವುದು ಇದರ ಮುಖ್ಯಾಂಶವಾಗಿದೆ. ಮತ್ತೊಂದು ಕಡೆ, ಪಿರಮಿಡ್ ಮಾಸ್ಟರುಗಳು ಬೋಧನೆಯಲ್ಲಿ ಕೂಡ ತರಬೇತಿ ಪಡೆದು ಬೋಧಕರಾಗಲು ಸಾಧ್ಯ. ಪ್ರತ್ಯಕ್ಷಜ್ಞಾನವು ಧ್ಯಾನದಿಂದ, ಪರೋಕ್ಷ ಜ್ಞಾನವು ಸ್ವಾಧ್ಯಾಯದಿಂದ ಪ್ರಾಪ್ತವಾಗುವುದು. ಪ್ರತ್ಯಕ್ಷ ಜ್ಞಾನವನ್ನು ಪಡೆಯಲು ಪರೋಕ್ಷ ಜ್ಞಾನ ಅತಿ ಸಹಾಯಕಾರಿ. ಆದ್ದರಿಂದ, ಸ್ವಾಧ್ಯಾಯ ಅತಿ ಮುಖ್ಯವಾದದ್ದು ಎಂದು ಎಲ್ಲಾ ಧ್ಯಾನಿಗಳಿಗೂ ತಿಳಿದ ವಿಷಯವೇ.

ಬ್ರಹ್ಮರ್ಷಿ ಪತ್ರೀಜಿ ಅವರ ಧ್ಯಾನ ಕೃತಿಗಳನ್ನೇ ಪಠ್ಯಗಳಾಗಿ ಆಯ್ಕೆ ಮಾಡಲಾಗಿದೆ. ಕೆಲವು ಪಾಶ್ಚಾತ್ಯರ ಜ್ಞಾನಾಂಶಗಳು, ಇನ್ನೂ ಕೆಲವು ಆಧ್ಯಾತ್ಮಿಕ ಶಾಸ್ತ್ರಪರಿಜ್ಞಾನ ವಿಶೇಷಗಳು ಕೂಡ ಜೋಡಿಸಲಾಗಿದೆ. ಬ್ರಹ್ಮರ್ಷಿ ಪತ್ರೀಜಿ ಅವರಿಂದಲೇ ಪರಿಷ್ಕಾರಗೊಂಡಿದೆ. ಬೋಧನೆ ವ್ಯವಸ್ಥೆ ಕ್ರೆಡಿಟ್ ಸಿಸ್ಟಮ್‌ನಲ್ಲಿರುತ್ತದೆ. ಮೊದಲಿಗೆ, ಧ್ಯಾನ ವಿಜ್ಞಾನ ತರಗತಿಗಳ ಪ್ರಾರಂಭ. ಕೋರ್ಸಿನ ಕೊನೆಯಲ್ಲಿ ಬ್ರಹ್ಮರ್ಷಿ ಪತ್ರೀಜಿ ಅವರಿಂದ ಪ್ರಮಾಣ ಪತ್ರ ನೀಡಲಾಗುತ್ತದೆ.

ಈ ರೀತಿ ಆಧ್ಯಾತ್ಮಿಕ ರಂಗದಲ್ಲಿ ಧ್ಯಾನ ವಿಜ್ಞಾನ ಶಾಸ್ತ್ರ ಪರಿಜ್ಞಾನವನ್ನು ವಿಸ್ತಾರವಾಗಿ ಸಾಮಾನ್ಯ ಜನಕ್ಕೆ ಕ್ರಮಬದ್ಧವಾಗಿ ಶೈಕ್ಷಣಿಕ ಪದ್ಧತಿಯಲ್ಲಿ ತಲುಪಿಸಿ, ಪತ್ರೀಜಿ ಅವರ "ಧ್ಯಾನ ಜಗತ್ತು" ಕನಸನ್ನು ನನಸು ಮಾಡುವ ಪ್ರಯತ್ನದಲ್ಲಿ, ಈ ಪಿರಮಿಡ್ ಆಧ್ಯಾತ್ಮಿಕ ಮತ್ತು ಧ್ಯಾನ ಶಿಕ್ಷಣಾಲಯ ಸ್ಥಾಪನೆಯೂ ಸಹ ಒಂದು ಉತ್ತಮ ಹೆಜ್ಜೆಯಾಗಿದೆ.

ಎಲ್ಲರೂ ಈ ಶಿಕ್ಷಣಾಲಯದಲ್ಲಿ ಸೇರಿ! ಎಲ್ಲರನ್ನು ಸೇರಿಸಿ! ಆಧ್ಯಾತ್ಮಿಕ ಕೃತಿಗಳನ್ನು ಓದಿ! ಓದಿಸಿ!! ಧ್ಯಾನಮಯ ಜೀವನವನ್ನು ವಿಸ್ತರಿಸುವ, ಧ್ಯಾನಜ್ಯೋತಿಯನ್ನು ವಿಸ್ತರಿಸುವ, ಧ್ಯಾನಜ್ಯೋತಿಯನ್ನು ಬೆಳಗುವ ಆತ್ಮಜ್ಞಾನಿಗಳಾಗಿ ಬಾಳೋಣ!!

**- ಬಿ.ಶಿವರಾಮಪ್ಪ, ಬೆಂಗಳೂರು**

# ಆನಾಪಾನಸತಿ ಧ್ಯಾನ

**ಧ್ಯಾನದ ವಿಧಾನ :** ಸುಖಾಸನದಲ್ಲಿ ಹಾಯಾಗಿ ಕುಳಿತುಕೊಂಡು, ಎರಡೂ ಕೈ ಬೆರಳುಗಳನ್ನು ಪರಸ್ಪರ ಜೋಡಿಸಿಕೊಂಡು, ಕಣ್ಣೆರಡೂ ಮುಚ್ಚಿ ಸಹಜವಾಗಿ ನಡೆಯುತ್ತಿರುವ ಉಸಿರಾಟವನ್ನು ಗಮನಿಸುತ್ತಿರಬೇಕು. ಯಾವ ಮಂತ್ರ, ಜಪ ಅಥವಾ ನಾಮಸ್ಮರಣೆ ಇರಬಾರದು. ಯಾವ ದೈವೀಕಲ್ಪನೆಗಳ ಅಗತ್ಯವಿಲ್ಲ, ಸಹಜವಾಗಿಯೇ ನಡೆಯುತ್ತಿರುವ ಉಸಿರಾಟವನ್ನು ಆಹ್ಲಾದದಿಂದ ಗಮನಿಸುತ್ತಿರಿ ಅಷ್ಟೆ. ಸಹಜವಾದ ಉಸಿರಾಟದ ಮೇಲೆಯೇ ಗಮನವಿಡುತ್ತಿದ್ದರೆ, ಕ್ರಮೇಣ ಆಲೋಚನಾ ರಹಿತ ಸ್ಥಿತಿ ಉಂಟಾಗುತ್ತದೆ. ಇದೇ ಧ್ಯಾನ ಸ್ಥಿತಿ. ಈ ಧ್ಯಾನ ಸ್ಥಿತಿಯಲ್ಲಿ ಅಪಾರವಾದ ವಿಶ್ವಮಯ ಪ್ರಾಣಶಕ್ತಿ (ಕಾಸ್ಮಿಕ್ ಎನರ್ಜಿ) ಶರೀರದಲ್ಲಿ ಪ್ರವೇಶಿಸಿ, ನಾಡಿಮಂಡಲ ಶುದ್ಧಿಯಾಗಿ ಅದ್ಭುತವಾದ ಆರೋಗ್ಯ ದೊರಕುತ್ತದೆ. ಪ್ರತಿದಿನ ನಿಯಮಬದ್ಧವಾಗಿ ಧ್ಯಾನ ಮಾಡುವುದರಿಂದ, ದೇಹದಲ್ಲಿ ವಿಶ್ವಪ್ರಾಣಶಕ್ತಿಯ ಮಟ್ಟ ಹೆಚ್ಚಿ ಸುಪ್ತಚೇತನಗಳು ಜಾಗೃತಿಯಾಗುತ್ತವೆ. ಕ್ರಮೇಣ ದಿವ್ಯಚಕ್ಷು ಉತ್ತೇಜನಗೊಳ್ಳುತ್ತದೆ. ಪಿರಮಿಡ್ ಶಕ್ತಿ ಲಭ್ಯವಿದ್ದೆಡೆ, ಪಿರಮಿಡ್‌ಗಳನ್ನು ಬಳಸಿ ಧ್ಯಾನ ಮಾಡಿ, ಧ್ಯಾನ ಸ್ಥಿತಿ ಬೇಗ ಬರುತ್ತದೆ; ಧ್ಯಾನ ಶಕ್ತಿ ಅಪಾರವಾಗಿ ಹೆಚ್ಚುತ್ತದೆ.

## ಧ್ಯಾನದ ಲಾಭಗಳು



- ★ ಸಂಪೂರ್ಣ ಆರೋಗ್ಯ
- ★ ನೆನಪಿನ ಶಕ್ತಿ ವೃದ್ಧಿ
- ★ ಮೂರನೇ ಕಣ್ಣು ಉತ್ತೇಜನ
- ★ ಆತ್ಮ ವಿಶ್ವಾಸ
- ★ ಜೀವನದ ಗುರಿಯ ಸ್ಪಷ್ಟತೆ
- ★ ಆಧ್ಯಾತ್ಮಿಕ ಜ್ಞಾನ
- ★ ಏಕಾಗ್ರತೆಯ ಶಕ್ತಿ
- ★ ಮಾನಸಿಕ ಶಾಂತಿ
- ★ ಬುದ್ಧಿ ಸೂಕ್ಷ್ಮತೆ



# ಏಕತಾ ಧ್ಯಾನ

"ಏಕತಾ ಧ್ಯಾನ" ಎಂಬುದು ಒಂದು "ಸಾಮೂಹಿಕ ಧ್ಯಾನ ಗೋಷ್ಠಿ". ನಾವು ಎಲ್ಲಿದ್ದರೆ ಅಲ್ಲೇ.
ಒಂದೇ ಸಮಯದಲ್ಲಿ ಎಲ್ಲರೂ ಕುಳಿತು ಮಾಡುವ ಧ್ಯಾನವು ಎಲ್ಲರನ್ನೂ ಒಗ್ಗೂಡಿಸುತ್ತದೆ.

## "ಪ್ರತಿ ಭಾನುವಾರ ಬೆಳಗ್ಗೆ 6 ಗಂಟೆಯಿಂದ 7 ಗಂಟೆಯವರೆಗೆ"

ಒಂದು ಗಂಟೆಯ ಸಮಯವನ್ನು ಈ ಶ್ರೇಷ್ಠ 'ಏಕತಾ ಸಂಪರ್ಕ'ಕ್ಕಾಗಿ ಆಯ್ಕೆ ಮಾಡಲಾಗಿದೆ.
ಇದು ಜೂನ್1, 2008 ರಿಂದ ಆರಂಭಗೊಂಡು ಡಿಸೆಂಬರ್ 2012ರ ಅಂತ್ಯಕ್ಕೆ ಕೊನೆಗೊಳ್ಳುತ್ತದೆ.

ಶ್ರೇಷ್ಠ ಏಕತಾ ಭಾವದೊಂದಿಗೆ "ಧ್ಯಾನ ಜಗತ್"ನ್ನು ಸಾಧಿಸೋಣ

## 2012ರ ಹೊತ್ತಿಗೆ ಇಡೀ ಜಗತ್ತನ್ನು ಆಧ್ಯಾತ್ಮೀಕರಿಸೋಣ !

"ಏಕತಾ ಧ್ಯಾನ ಯೋಜನೆ"ಯು ಇಡೀ ಜಗತ್ತಿನಾದ್ಯಂತ ವಿಸ್ತರಿಸಲೇಬೇಕು. ವಿಶ್ವಪ್ರಜ್ಞೆ ಮತ್ತು ಜಗತ್ತಿನ ಸಮನ್ವಯವನ್ನು
ಸಾಧ್ಯವಾದಷ್ಟು ಶೀಘ್ರವಾಗಿ ಜಗತ್ತಿನಾದ್ಯಂತ ಪಸರಿಸುವ ಘನ ಉದ್ದೇಶಕ್ಕಾಗಿ ನಾವೆಲ್ಲರೂ ಶ್ರಮಿಸೋಣ.
ಇಡೀ ಅಸ್ತಿತ್ವದ ಜೊತೆಯಲ್ಲಿ ನೀವೂ ಸಹ ಇರುವಿರಿ ಎಂದು ನೀವು ಭಾವಿಸಿದರೆ,
ಈ ಏಕತಾ ಧ್ಯಾನದಲ್ಲಿ ನೀವೂ ಸಹ ಒಬ್ಬ ಅಭ್ಯರ್ಥಿಯೇ ಹೌದು !

*"ನಿಮ್ಮ ಉಸಿರಿನೊಂದಿಗೇ ಇರಿ"*

# 2012

ಗುರೂಜಿ ಕೃಷ್ಣಾನಂದರವರು ಸುಮಾರು ಐದು ವರ್ಷಗಳವರೆಗೆ ಮಹರ್ಷಿ ಅಮರರ ನಿಕಟ ಸಂಪರ್ಕದಲ್ಲಿದ್ದು, ಅವರ ಬಹಳಷ್ಟು ಬೋಧನೆಗಳನ್ನು ಸಂಗ್ರಹಿಸಿದರು. ಅವರು ಒಬ್ಬ ಋಷಿ ಮತ್ತು ಜ್ಯೋತಿ ಕಾರ್ಯಕರ್ತರು. ಮಹರ್ಷಿ ಅಮರರ ಬೋಧನೆಗಳ ಆಧಾರದ ಮೇಲೆ ಅವರು ಧ್ಯಾನಯೋಗವನ್ನು ಬೆಳೆಸಿ, 1988ರಿಂದ ಧ್ಯಾನಾಭ್ಯಾಸವನ್ನು ಕಲಿಸುತ್ತಾ ಸಾವಿರಾರು ಜನರಿಗೆ ಆಧ್ಯಾತ್ಮಿಕ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. ಅವರು, ತಮ್ಮ ಗುರು ಮತ್ತು ಸಪ್ತರ್ಷಿಗಳಿಂದ ಪಡೆದ ಜ್ಞಾನವನ್ನು ಸಾಧಕರಿಗೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡುವ ಏಕೈಕ ಉದ್ದೇಶದಿಂದ ಲಾಭಕರವಲ್ಲದ, ಧಾರ್ಮಿಕವಲ್ಲದ "ಮಾನಸ ಫೌಂಡೇಶನ್" ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದಾರೆ. ಪ್ರಳಯಕಾಲದ ಪರಿಣಾಮಗಳನ್ನು ಪೂರ್ತಿಯಾಗಿ ಆಧ್ಯಾತ್ಮಿಕ ಪ್ರಗತಿಗಾಗಿ ವಿನಿಯೋಗಿಸಲು ಶ್ರಮಿಸುತ್ತಿರುವ ಎಷ್ಟೋಮಂದಿ ಶ್ರೇಷ್ಠ ಗುರುಗಳ ಪೈಕಿ ಕೃಷ್ಣಾನಂದರೂ ಒಬ್ಬರು. **"2012 ಅಂತ್ಯ ಅಥವಾ ಆರಂಭ"** ಎಂಬ ಪುಸ್ತಕದಿಂದ ಆಯ್ದ ಕೆಲವು ವಿಷಯಗಳನ್ನು ಧ್ಯಾನ ಕಸ್ತೂರಿಯ ಓದುಗರಿಗಾಗಿ, ಇಲ್ಲಿ ನೀಡಲಾಗಿದೆ.

**-ಸಂಪಾದಕೀಯ ತಂಡ**

## 2012 ಬಗ್ಗೆ

2012ರ ಬಗ್ಗೆ ಜನರಲ್ಲಿ ಬಹಳಷ್ಟು ಭಯ ಮತ್ತು ಗೊಂದಲವಿದೆ. ಇದು ಆ ವರ್ಷಕ್ಕೆ ಸಂಬಂಧಿಸಿದ ಭವಿಷ್ಯವಾಣಿಗಳ ಬಗ್ಗೆ ತಿಳಿದುಕೊಂಡಿರುವ ಜನರ ಕತೆಯಾದರೆ, ಬಹಳಷ್ಟು ಜನರಿಗೆ 2012ರ ಮಹತ್ವದ ಬಗ್ಗೆಯೇ ಅರಿವಿಲ್ಲ. ಇನ್ನೊಬ್ಬರನ್ನು ಹೆದರಿಸುವುದು ಸುಲಭ, ಆದರೆ, ಹೆದರಬೇಡ, ಏನೂ ಆಗುವುದಿಲ್ಲ, ನಾವೆಲ್ಲಾ ಸುರಕ್ಷಿತವಾಗಿರುತ್ತೇವೆ, ಎಂದು ಆಶ್ವಾಸನೆ ಕೊಡುವುದು ಸುಲಭವಲ್ಲ. 2012ರ ಸತ್ಯವೇನೆಂದರೆ, ಜ್ಯೋತಿ ಕಾರ್ಯಕರ್ತರು ಮತ್ತು ನವಯುಗದವರು ಬಹಳಷ್ಟು ವಿನಾಶಗಳ ಭವಿಷ್ಯ ಹೇಳಿದ್ದಾರಾದರೂ, ಅವು ಕೇವಲ ಸಾಧ್ಯತೆಗಳು ಮಾತ್ರ. ಅವು ಸಂಭವಿಸಬಹುದು ಅಥವಾ ಸಂಭವಿಸದೆಯೂ ಇರಬಹುದು. ಈ ಸಮಯದಲ್ಲಿ ನಾನು ಹೇಳುವುದು ಇಷ್ಟೇ: 'ಏನಾಗುವುದೋಗೊತ್ತಿಲ್ಲ' ಇದಿಷ್ಟೇ ಸತ್ಯ.

ನಮ್ಮ ಸಕಾರಾತ್ಮಕಗೊಳ್ಳುವಿಕೆ ಮತ್ತು ಪರಿವರ್ತನೆ ನಮ್ಮ ಭವಿಷ್ಯದ ಮೇಲೆ ಪರಿಣಾಮ ಬೀರುತ್ತವೆ. ನಾವೆಲ್ಲ ಬದಲಾದರೆ, ನಮ್ಮ ವಿಧಿಯೂ ಬದಲಾಗುತ್ತದೆ. ಆಗ 2012 ಬೆಳಕಿಗೆ ಬಾಗಿಲಾಗುತ್ತದೆ.

ಜಗತ್ತು 2012ರಲ್ಲಿ ಕೊನೆಗೊಳ್ಳುವುದಿಲ್ಲ, ಅಲ್ಲೊಂದು ಹೊಸ ಉದಯ, ಹೊಸ ಬದುಕು ನಮಗಾಗಿ ಕಾಯುತ್ತಿದೆ.

## ಪ್ರವೇಶದ ಸಮಯ

ಫೋಟಾನ್ ಬೆಲ್ಟ್ ಅತ್ಯಂತ ಸೂಕ್ಷ್ಮ ಚೈತನ್ಯ ವಲಯವಾಗಿದ್ದು, ಇದು ತಾರಾಗರ್ಭ(Nebula)ದಂಥ ಘನವಸ್ತುವಲ್ಲವಾದ್ದರಿಂದ, ನಮ್ಮ ವಿಜ್ಞಾನಿಗಳು ತಮ್ಮಲ್ಲಿನ ಸಾಧನ - ಪರಿಕರಗಳ ಸಹಾಯದಿಂದ ಅದನ್ನು ಗುರುತಿಸಲಾರರು. ಹಾಗೊಮ್ಮೆ ಅವರು ಹೇಗೋ ಅದರ ಅಸ್ತಿತ್ವವನ್ನು ಕಂಡುಹಿಡಿದು ದೃಢೀಕರಿಸಿದರೂ ಸಹ, ನಮ್ಮ ಸರ್ಕಾರಗಳು ಜನರಲ್ಲಿ ಭೀತಿಯುಂಟಾಗಬಹುದೆಂಬ ಅಂಜಿಕೆಯಿಂದ ಈ ವಿಚಾರ ಹೊರಬರಲು ಬಿಡುವುದಿಲ್ಲ.

ನಾವು 2012ರ ಡಿಸೆಂಬರ್ 21ರಂದು ಫೋಟಾನ್ ಬೆಲ್ಟನ್ನು ಪ್ರವೇಶಿಸಿ, ಆ ಮುಂದಿನ ನೂರಾರು ವರ್ಷಗಳವರೆಗೆ ಅದರೊಳಗೆ ಇರುತ್ತೇವೆ. ಅಂದರೆ, ನಿಖರವಾಗಿ, 505 ವರ್ಷಗಳವರೆಗೆ ನಾವು ಈ ವಲಯದೊಳಗೆ ಇರುತ್ತೇವಲ್ಲದೆ, ಸಾಮಾನ್ಯ ನಂಬಿಕೆಯಂತೆ 2000 ವರ್ಷಗಳವರೆಗಲ್ಲ.

2009ರ ಡಿಸೆಂಬರ್ 21ರಂದು ನಾವು ಅದರ ಪ್ರಭಾವಲಯವನ್ನು ಪ್ರವೇಶಿಸಲಿದ್ದೇವೆ. ಅಂದರೆ, ನಾವು ಫೋಟಾನ್ ಬೆಲ್ಟ್‌ನೊಳಗೆ ಹೆಜ್ಜೆಯಿಡುವ ಮೂರು ವರ್ಷಗಳ ಮೊದಲೇ, ಅದರ ಪರಿಣಾಮಗಳು ಆರಂಭವಾಗಲಿವೆ. ಈ ಪ್ರಭಾವಲಯವನ್ನು ಪ್ರವೇಶಿಸುವ ಮೊದಲೇ ನಾವು ಅದರೊಂದಿಗೆ ಸಂಪರ್ಕಗೊಂಡು, ನಮ್ಮ ಪರಿವರ್ತನೆಯನ್ನು ವೇಗಗೊಳಿಸಲು, ಅದರಿಂದ ಚೈತನ್ಯವನ್ನು ಪಡೆಯಬಹುದು.